# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರಗಳಲ್ಲಿ ತೊಡಗಿರುವ ಕಾರ್ಮಿಕರನ್ನು ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್-ಧನ್ ಯೋಜನೆಯಲ್ಲಿ ನೋಂದಣಿ ಮಾಡಿಸುವ ಕುರಿತು.

**ಓದಲಾಗಿದೆ:**
1) ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ನವದೆಹಲಿ ಇವರ ಅ.ಸ. ಪತ್ರ ಸಂಖ್ಯೆ: M-21020/ 06/ 2019-RW, ದಿನಾಂಕ: 27-09-2019.
2) ಸರ್ಕಾರದ ಪತ್ರ ಸಂಖ್ಯೆ: ಕಾಇ 59 ಎಲ್ಇಟಿ 2019, ದಿನಾಂಕ: 03/12/2019 ಮತ್ತು 06/12/2019.
3) ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯ ಕಡತ ಸಂಖ್ಯೆ: ಕಕಾಮಂ/ ಕಲ್ಯಾಣ/ PM-SYM/ CR-21/19-20

*******

**ಪ್ರಸ್ತಾವನೆ:**

ಭಾರತ ಸರ್ಕಾರವು ಇತ್ತೀಚೆಗೆ ಜಾರಿಗೆ ತಂದಿರುವ ನೂತನ ಎರಡು ಮಹತ್ವಾಕಾಂಕ್ಷಿ ಯೋಜನೆಗಳಾದ (1) ಅಸಂಘಟಿತ ಕಾರ್ಮಿಕರಿಗೆ ಮಾಸಿಕ ಪಿಂಚಣಿ ಒದಗಿಸುವ, **"ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್‌ಧನ್ ಯೋಜನೆ (PM-SYM)" ಹಾಗೂ (2) "National Pension Scheme for the Traders and self Employed Persons (NPS-Traders)"** ಯೋಜನೆಗಳಡಿ ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯವು ಮಾರ್ಚ್-2020ರ ಅಂತ್ಯದ ವೇಳೆಗೆ ರಾಜ್ಯದಲ್ಲಿ PM-SYM ಯೋಜನೆಯಡಿ 1 ಕೋಟಿ ಫಲಾನುಭವಿಗಳನ್ನು ಹಾಗೂ NPS-Traders ಯೋಜನೆಯಡಿ 50 ಲಕ್ಷ ಫಲಾನುಭವಿಗಳನ್ನು ನೋಂದಾಯಿಸುವ ಗುರಿ ನಿಗದಿಪಡಿಸಿರುವುದಾಗಿ ತಿಳಿಸುತ್ತಾ, ಸದರಿ ಗುರಿಯನ್ನು ಎಲ್ಲಾ ರೀತಿಯಲ್ಲೂ ಕಾರ್ಯ ಪ್ರವೃತ್ತರಾಗುವಂತೆ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಅರೆ ಸರ್ಕಾರಿ ಪತ್ರದಲ್ಲಿ ನಿರ್ದೇಶನ ನೀಡಿದೆ.

ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್-ಧನ್ ಯೋಜನೆಯು (PM-SYM) ಮಾರ್ಚ್, 2019ರಲ್ಲಿ ಜಾರಿಗೆ ಬಂದಿದ್ದು, ಕಟ್ಟಡ ಕಾರ್ಮಿಕರು ಸೇರಿದಂತೆ 126 ವಲಯದ ಅಸಂಘಟಿತ ಕಾರ್ಮಿಕರು ಈ ಯೋಜನೆಯ ವ್ಯಾಪ್ತಿಗೆ ಒಳಪಡುತ್ತಾರೆ. ಈ ಯೋಜನೆಯ ವ್ಯಾಪ್ತಿಗೆ ಒಳಪಡುವವರು 18 ವರ್ಷದಿಂದ 40 ವರ್ಷದ ವಯೋಮಿತಿ ಒಳಗಿರಬೇಕು. ಅವರ ಮಾಸಿಕ ಗರಿಷ್ಠ ವೇತನ ರೂ. 15,000/- ಒಳಗಿರಬೇಕು. ಇ.ಎಸ್.ಐ, ಪಿ.ಎಫ್ ಮತ್ತು ಎನ್‌ಪಿಎಸ್ ಯೋಜನೆಯ ವ್ಯಾಪ್ತಿಗೆ ಒಳಪಟ್ಟವರು ಮತ್ತು ಆದಾಯ ತೆರಿಗೆ ಪಾವತಿಸುವವರು ಇದರ ಸದಸ್ಯತ್ವ ಪಡೆಯಲು ಅರ್ಹರಿರುವುದಿಲ್ಲ. ಈ ಯೋಜನೆಯ ವ್ಯಾಪ್ತಿಗೆ ಒಳಪಡುವವರು 18 ವರ್ಷದಿಂದ 40 ವರ್ಷದ ವಯೋಮಾನದವರು ನೊಂದಣಿ ಮಾಡಿಸಿದ ನಂತರ ಮಾಸಿಕವಾಗಿ ಈ ವಯೋಮಾನಕ್ಕೆ ನಿಗಧಿಪಡಿಸಿದ ಮಾಸಿಕ ವಂತಿಕೆಯನ್ನು ತಮ್ಮ ವಯಸ್ಸು 60 ವರ್ಷ ಆಗುವವರೆಗೂ ಪಾವತಿಸಬೇಕು. ಇದಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರವು ಅದೇ ಪ್ರಮಾಣದ ಮಾಸಿಕ ವಂತಿಕೆಯನ್ನು (Matching Contribution) ಫಲಾನುಭವಿಯ ಖಾತೆಗೆ ಜಮೆ ಮಾಡುತ್ತದೆ. ಈ ಯೋಜನೆಯಡಿ ನೋಂದಣಿಗೊಂಡ ಕಾರ್ಮಿಕರಿಗೆ 60 ವರ್ಷ ತಲುಪಿದ ನಂತರ ಅವರಿಗೆ ಮಾಸಿಕ ರೂ. 3,000/- ಪಿಂಚಣಿ ದೊರೆಯುತ್ತದೆ.

ದಿನಾಂಕ: 19/11/2019 ರಂದು ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯದ ಕಾರ್ಯದರ್ಶಿಗಳು ನಡೆಸಿದ ವಿಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾನ್‌ಧನ್ ಯೋಜನೆಯ ಪ್ರಗತಿಯು ತೃಪ್ತಿಕರವಾಗಿರುವುದಿಲ್ಲ ಎಂಬುದನ್ನು ಪ್ರಸ್ತಾಪಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಸೂಚಿಸಿರುತ್ತಾರೆ. ಅದರಂತೆ ಎಲ್ಲಾ ರಾಜ್ಯಗಳು ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರದಲ್ಲಿ ತೊಡಗಿರುವ ಕಾರ್ಮಿಕರನ್ನು ಈ ಯೋಜನೆಯಡಿ ನೋಂದಾಯಿಸುವಂತೆ ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ರಾಜ್ಯದಲ್ಲಿ ಇದುವರೆಗೂ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್-ಧನ್ ಯೋಜನೆಯಲ್ಲಿ ಒಟ್ಟಾರೆಯಾಗಿ 60,636 ಕಾರ್ಮಿಕರು ಮಾತ್ರ ಫಲಾನುಭವಿಗಳಾಗಿ ನೋಂದಣಿ ಮಾಡಿಸಿಕೊಂಡಿರುತ್ತಾರೆ. ಈ ಸಂಖ್ಯೆಯು ತುಂಬಾ ಕಡಿಮೆಯಾಗಿರುವುದರಿಂದ ಕಟ್ಟಡ ಕಾರ್ಮಿಕರನ್ನು ಸಹ ಹೆಚ್ಚಿನ ಸಂಖ್ಯೆಯಲ್ಲಿ ನೊಂದಣಿಗೊಳಿಸಲು ಕ್ರಮ ಕೈಗೊಳ್ಳುವಂತೆ ಹಾಗೂ ಈ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲು ಮಂಡಳಿಯ ವತಿಯಿಂದ ಹಣ ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಸರ್ಕಾರದ ಪತ್ರಗಳಲ್ಲಿ ಸೂಚಿಸಲಾಗಿದೆ.

ಪ್ರಸ್ತುತ ಮಂಡಳಿಯಲ್ಲಿ ಸುಮಾರು 21 ಲಕ್ಷ ಕಟ್ಟಡ ಕಾರ್ಮಿಕರು ನೊಂದಣಿ ಹೊಂದಿದ್ದು, ಇದರಲ್ಲಿ 8 ಲಕ್ಷ ಕಾರ್ಮಿಕರು ಮಾತ್ರ ನವೀಕರಿಸಿಕೊಂಡಿರುತ್ತಾರೆ. ರಾಜ್ಯದಾದ್ಯಂತ ಮಂಡಳಿಯ ಫಲಾನುಭವಿಗಳಾಗಿ ನೊಂದಣಿಯಾಗಿ ನವೀಕರಿಸಿಕೊಂಡು, ಚಾಲ್ತಿಯಲ್ಲಿರುವ 18 ವರ್ಷದಿಂದ 40 ವರ್ಷದೊಳಗಿನ ಕಾರ್ಮಿಕರು 4,73,934 ಸಂಖ್ಯೆಯಲ್ಲಿದ್ದು, 18 ವರ್ಷದ ವಯೋಮಾನದ ಕಾರ್ಮಿಕರಿಗೆ ಮಾಸಿಕ ರೂ. 55/- ಪಾವತಿಸಬೇಕಾಗಿದ್ದು, ಹಾಗೆಯೇ 40 ವರ್ಷದ ವಯೋಮಾನದ ಕಾರ್ಮಿಕರಿಗೆ ಮಾಸಿಕ ರೂ. 200/- ಗಳನ್ನು ಪಾವತಿಸಬೇಕಾಗಿರುತ್ತದೆ. ಈ ಮೊತ್ತವನ್ನು ಸರಾಸರಿಯಾಗಿ ರೂ. 100/- ಗಳೆಂದು ಪರಿಗಣಿಸಿ ಲೆಕ್ಕ ಹಾಕಿದಲ್ಲಿ ಮಾಸಿಕವಾಗಿ ಅಂದಾಜು ರೂ.4.73 ಕೋಟಿ ಮೊತ್ತವನ್ನು ಮಂಡಳಿಯಿಂದ ಮರುಪಾವತಿ ಮಾಡಬೇಕಾಗುತ್ತದೆ ಹಾಗೂ ವಾರ್ಷಿಕ ರೂ. 53.87 ಕೋಟಿ ಮೊತ್ತವನ್ನು ಈ ಯೋಜನೆಗಾಗಿ ಮೀಸಲಿಡಬೇಕಾಗುತ್ತದೆ. ಆದ್ದರಿಂದ, ಮುಂದಿನ ವರ್ಷಗಳಲ್ಲಿ ಹೊಸದಾಗಿ ನೊಂದಣಿ ಅಥವಾ ನವೀಕರಣದ ಮೂಲಕ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಇದರ ವ್ಯಾಪ್ತಿಗೆ ಬರುವ ಸಾಧ್ಯತೆಗಳಿದ್ದು, ಯೋಜನೆಯನ್ನು ಅಂಗೀಕರಿಸುವ ಸಮಯದಲ್ಲಿ ಇದರ ಪರಿಣಾಮವಾಗಿ ದೀರ್ಘಾವಧಿಯಲ್ಲಿ ಮಂಡಳಿಯ ಮೇಲೆ ಆಗಬಹುದಾದ ಆರ್ಥಿಕ ಆಯವ್ಯಯ ಜವಾಬ್ದಾರಿಯನ್ನು ಕೂಡಾ ಗಮನಿಸಬೇಕಾಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್-ಧನ್ ಯೋಜನೆಗೆ ಮಂಡಳಿಯ ಫಲಾನುಭವಿಗಳನ್ನು ಒಳಪಡಿಸಲು ವಾರ್ಷಿಕವಾಗಿ ಅಂದಾಜು ರೂ. 53.87 ಕೋಟಿ ವೆಚ್ಚ ಖರ್ಚಾಗಲಿದ್ದು, ಇದನ್ನು ಮಂಡಳಿಯ ವತಿಯಿಂದ ಭರಿಸಲು ಸರ್ಕಾರದ ಅನುಮೋದನೆಯನ್ನು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ ಕಾಇ 59 ಎಲ್‌ಇಟಿ 2019 (ಭಾ-2), ಬೆಂಗಳೂರು, ದಿನಾಂಕ: 18/12/2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್-ಧನ್ ಯೋಜನೆಯಡಿಯಲ್ಲಿ **(PM-SYM)** 18 ವರ್ಷದಿಂದ 40 ವರ್ಷದ ವಯೋಮಿತಿಯ ಕಟ್ಟಡ ಕಾರ್ಮಿಕರು ಹೊಸದಾಗಿ ನೋಂದಣಿ ಅಥವಾ ನವೀಕರಣದ ಮೂಲಕ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಇದರ ವ್ಯಾಪ್ತಿಗೆ